716 (1129) ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) : ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಉಪ್ಪುನೀರು ತಡೆಗೋಡೆ ರಚನೆ ಸಮರ್ಪಕವಾಗಿ ನಡೆಸದೇ ಕುಡಿಯುವ ನೀರಿಗೆ ಉಪ್ಪು ನೀರು ಮಿಶ್ರಣವಾಗಿರುವ ಅಂಶ ಸರ್ಕಾರದ ಗಮನಕ್ಕೆ ತರಲಾಗಿದೆಯೇ ;

ಆ) ಹೌದಾದಲ್ಲಿ, ಕೈಗೊಂಡಿರುವ ಕ್ರಮಗಳಾವುವು ;

ಇ) ಉಪ್ಪುನೀರು ತಡೆಗೋಡೆ ರಚನೆಗೆ ಈ ಸಾಲಿನಲ್ಲಿ ಇರಿಸಿದ ಅನುದಾನವೆಷ್ಟು ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)–

ಅ) ಸರಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈಗಾಗಲೇ 71 ಉಪ್ಪು ನೀರು ತಡೆಗೋಡೆ ನಿರ್ಮಿತಿಗಳನ್ನು ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಿರ್ಮಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ 5 ಹೊಸ ಕಾಮಗಾರಿಗಳನ್ನು ಹಾಗೂ 2 ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಲದೆ, ಇಂತಹ ನಿರ್ಮಿತಿಗಳ ನಿರ್ಮಾಣಕ್ಕೆ ಇನ್ನೂ ಬೇಡಿಕೆ ಇರುವುದರಿಂದ ಅನುದಾನದ ಲಭ್ಯತೆಯನ್ನು ಅವಲಂಬಿಸಿ ಮುಂದೆ ಕೈಗೊಳ್ಳಲಾಗುವುದು.

ಇ) ರೂ.311.50 ಲಕ್ಷ ರೂ.ಗಳ ಅಂದಾಜು ಮೊತ್ತದ ಕಾಮಗಾರಿಗೆ ರೂ.93.45 ಲಕ್ಷಗಳ ಅನುದಾನ ಒದಗಿಸಿದೆ.

824 (1344) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) : ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಿಂದಿನ ಮೂರು ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ಬೆಂಗಳೂರಿನ ನಗರಸಭೆ/ಟಿ.ಎಂ.ಸಿ. ಹಾಗೂ ಸಿ.ಎಂ.ಸಿ.ಗಳಲ್ಲಿ ಗುರ್ತಿಸಲಾದ ವಸತಿ ಪ್ರದೇಶಗಳ ಸಂಖ್ಯೆ ಎಷ್ಟು ; ಇದರ ಪೈಕಿ ಎಷ್ಟು ಪ್ರಕರಣಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ ; (ಪ್ರದೇಶದ ಹೆಸರು ಹಾಗೂ ವಿಸ್ತೀರ್ಣವನ್ನು ಒದಗಿಸುವುದು) ;